
# ನೀವು ಕಂಡರಿಯದ ಕುದ್ಮುಲ್ ರಂಗರಾವ್




**ಕನ್ನಡ** ಸಮಾಜ ತನ್ನ ವಿವೇಕದ ಭಿತ್ತಿಯನ್ನಾಗಿ ಇರಿಸಿಕೊಳ್ಳಬೇಕಾದ ಚೇತನಗಳಲ್ಲಿ ಕುದ್ಮುಲ್ ರಂಗರಾವ್ ಒಬ್ಬರು. ದಲಿತರ ಏಳಿಗೆಯ ಪ್ರಯತ್ನಗಳಿರಲಿ, ಚಿಂತನೆಯೂ ಇರದ ಕಾಲಘಟ್ಟದಲ್ಲಿ ಜಾತಿಯ ಕಾರಣದಿಂದಾಗಿ ಶೋಷಣೆಗೊಳಗಾದವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಕನಸು ಕಂಡು, ಆ ನಿಟ್ಟಿನಲ್ಲಿ ದಲಿತ ಶಾಲೆ ಆರಂಭಿಸಿದ ಅಗ್ಗಳಿಕೆ ರಂಗರಾವ್ ಅವರದು.

ದಲಿತೋದ್ಧಾರದ ನಿಟ್ಟಿನಲ್ಲಿ ಮಹಾತ್ಮ ಗಾಂಧಿ ಅವರಿಗೂ ಗುರುಸಮಾನರಾದ ರಂಗರಾವ್ ಅವರನ್ನು ಹೊಸ ತಲೆಮಾರಿಗೆ ಪರಿಚಯಿಸುವ ವಿಶಿಷ್ಟ ಪ್ರಯತ್ನ 'ನೀವು ಕಂಡರಿಯದ ಕುದ್ಮುಲ್ ರಂಗರಾವ್.' ಕನ್ನಡದಲ್ಲಿ ಈಗಾಗಲೇ ರಂಗರಾವ್‌ರ ಬದುಕು–ಸಾಧನೆಯನ್ನು ಕಟ್ಟಿಕೊಡುವ ಕೆಲವು ಕೃತಿಗಳು ಪ್ರಕಟಗೊಂಡಿವೆ. ಆದರೆ, ಕುಟುಂಬದೊಳಗಿನಿಂದ ಮೂಡಿಬಂದ ಕಾರಣಕ್ಕಾಗಿ ಪ್ರಸಕ್ತ ಕೃತಿಗೆ ವಿಶೇಷ ಮಹತ್ವವಿದೆ. ರಂಗರಾವ್‌ರ ಮರಿಮಗಳು ಮತ್ತು ಮರಿಮರಿಮಗ ಒಟ್ಟಾಗಿ ರೂಪಿಸಿರುವ ಕೃತಿಯಿದು. ಕುಟುಂಬದ ಸದಸ್ಯರು ಬರೆದ ಕಾರಣದಿಂದಲೇ, 'ನೀವು ಕಂಡರಿಯದ ಕುದ್ಮುಲ್ ರಂಗರಾವ್' ಎನ್ನುವ ಶೀರ್ಷಿಕೆ ಅನ್ವರ್ಥವಾಗಿದೆ. ಇಂಗ್ಲಿಷ್‌ನಲ್ಲಿನ ಈ ಪುಸ್ತಕವನ್ನು ಬಿ.ಎ. ವಿವೇಕ ರೈ ಕನ್ನಡಕ್ಕೆ ತಂದಿದ್ದಾರೆ.

ರಂಗರಾವ್ ಅವರ ಬಗೆಗಿನ ಬಹುತೇಕ ದಾಖಲೆಗಳು ನಾಶವಾಗಿದ್ದು, ಅಳಿದುಳಿದ ನೆನಪು–ದಾಖಲೆಗಳನ್ನು ಸಂಗ್ರಹಿಸುವಲ್ಲಿ ಲೇಖಕರು ವಹಿಸಿರುವ ಬದ್ಧತೆ ಹಾಗೂ ಶ್ರಮ ಶ್ಲಾಘನೀಯ. ಕುಟುಂಬದ ಸದಸ್ಯರ ನಡುವೆ ರಂಗರಾವ್ ಅವರು 'ಕುದ್ಮುಲ್ ಪಿಜ್ಜ' ಎಂದೇ ಪ್ರಸಿದ್ಧರಾಗಿದ್ದಂತೆ. ಅದೇ ಹೆಸರನ್ನು ಕೃತಿಯುದ್ದಕ್ಕೂ ಬಳಸಿರುವುದು ಬರವಣಿಗೆಗೆ ಆಪ್ತ–ಆರ್ದ್ರ ಗುಣವನ್ನು ತಂದುಕೊಟ್ಟಿದೆ.

ರಂಗರಾವ್ ಹುಟ್ಟಿದ ಪರಿಸರ, ಕುಟುಂಬದ ಹಿನ್ನೆಲೆ, ಬೆಳೆದು ಬಂದ ಬಗೆ, ಶಿಕ್ಷಕ ಹಾಗೂ ನ್ಯಾಯವಾದಿ ವೃತ್ತಿಯಲ್ಲಿ ತೊಡಗಿಕೊಂಡಿದ್ದುದು, ಸಾರಸ್ವತ ಸಮಾಜ ಹಾಗೂ ಬ್ರಹ್ಮಸಮಾಜಗಳ ಪರಿಸರ, ಸಂಕೀರ್ಣ ಜಾತಿವ್ಯವಸ್ಥೆಯನ್ನು ಅರ್ಥ ಮಾಡಿಕೊಂಡ ಬಗೆ, ಪಂಚಮರಿಗೆ ಭೂಮಿಯನ್ನು ಹಂಚಿದ್ದು, ಡಿಸಿಎಂ ಶಾಲೆಯನ್ನು ನಡೆಸಿದ್ದು, ಮಹಿಳೆಯರ ಸಬಲೀಕರಣ, ದೇವದಾಸಿ ಪದ್ಧತಿ ವಿರುದ್ಧದ ಹೋರಾಟ, ಕೈದಿಗಳ ಪುನರ್ವಸತಿ – ಹೀಗೆ, ಮೂವತ್ತಮೂರು ಅಧ್ಯಾಯಗಳಲ್ಲಿ ರೂಪುಗೊಂಡಿರುವ ಕೃತಿ ರಂಗರಾವ್ ಅವರ ಬದುಕು–ಸಾಧನೆಯ ಬಗ್ಗೆ ಸ್ಥೂಲವಾದ ನೋಟವೊಂದನ್ನು ನೀಡುವಂತಿದೆ. ಈ ಅವಲೋಕನ ರಂಗರಾವ್‌ರ ಬಗ್ಗೆ ಗೌರವ–ಹೆಮ್ಮೆ ಮೂಡಿಸುವುದರ ಜೊತೆಗೆ, ಕನ್ನಡಿಗರು ಅವರನ್ನು ನೇಪಥ್ಯದಲ್ಲಿಯೇ ಇರಿಸಿರುವುದರ ಬಗ್ಗೆ ಯೋಚಿಸಲು ಒತ್ತಾಯಿಸುತ್ತದೆ.

ವಿವೇಕ ರೈ ಅವರ ಅನುವಾದ, ರಂಗರಾವ್‌ರ ಕುರಿತ ಅನುವಾದಕರ ಪ್ರೀತಿ–ಗೌರವ ಕಾಣಿಸುವಷ್ಟು ಸಹಜವಾಗಿದೆ, ಸೊಗಸಾಗಿದೆ.

**ಇಂಗ್ಲಿಷ್ ಮೂಲ: ಪ್ರೇಮಿ ಎಂ. ರಾವ್, ಜಿ. ಪಾಂಡುರಂಗ ರಾವ್; ಕನ್ನಡಕ್ಕೆ: ಬಿ.ಎ. ವಿವೇಕ ರೈ; 144; ಬೆ: ರೂ. 180; ಪ್ರ: ಬಹುರೂಪಿ, ಬೆಂಗಳೂರು. ಫೋನ್: 70191 82729**